**ಸಾಕ್ಷಿಯನ್ನು ದಿಃ 17.09.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಾನು ದ್ವಿತೀಯ ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ.

2. ನನ್ನ ತಾಯಿ ಸರಸ್ವತಿ ಯಾವುದೇ ವಿದ್ಯಾಭ್ಯಾಸ ಮಾಡಿಲ್ಲ. ಅವರಿಗೆ ಸಹಿ ಮಾಡಲು ನಾವೇ ಕಲಿಸಿರುತ್ತೇವೆ.

3. ನನ್ನ ತಾಯಿ ಈಗಲೂ ಆರೋಗ್ಯವಾಗಿದ್ದು, ಜಮೀನಲ್ಲಿ ಕೆಲಸ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

4. 2021 ರಿಂದ ಇಲ್ಲಿಯವರೆಗೆ ಈ ದಾವೆಯಲ್ಲಿ ಅವರು ನ್ಯಾಯಾಲಯಕ್ಕೆ ಬರುತ್ತಿದ್ದರು ಎಂದರೆ, 7-8 ತಿಂಗಳಿಂದ ಅವರಿಗೆ ಆರೋಗ್ಯ ಸರಿ ಇಲ್ಲ ಎಂದು ನುಡಿಯುತ್ತಾರೆ.

5. ನಿಮ್ಮ ತಾಯಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿದರೆ ನಿಜಾಂಶ ಗೊತ್ತಾಗುತ್ತದೆ ಎಂದು ನಿಮಗೆ ಅಧಿಕಾರ ಪತ್ರ ನೀಡಿದ್ದಾರೆ ಎಂದರೆ ಸರಿಯಲ್ಲ.

6. ಈ ದಾವೆ ಹಾಕಲು ವಕೀಲರಿಗೆ ನನ್ನ ತಾಯಿ ಮಾಹಿತಿ ನೀಡಿರುತ್ತಾರೆ. ಆ ಕಾರಣಕ್ಕೆ ಈ ದಾವೆಯ ವಿಧ್ಯಮಾನ ನಿಮಗೆ ಗೊತ್ತಿಲ್ಲ ಎಂದರೆ, ನಮಗೂ ಸಹ ತಿಳಿಸಿದ್ದಾರೆ ಎಂದು ನುಡಿಯುತ್ತಾರೆ.

7. ದಾವಾ ಸ್ವತ್ತುಗಳಲ್ಲಿ ವಿಭಾಗ ಕೋರಿ ದಾವ ಹೂಡಿದ್ದಾರೆ. ಅವರ ತಾತನ ಆಸ್ತಿಯಲ್ಲಿ ಭಾಗ ಬರಬೇಕು ಎಂದು ಹಾಕಿದ್ದಾರೆ. ನನ್ನ ತಾತನ ಹೆಸರು ನನಗೆ ಗೊತ್ತಿಲ್ಲ.

8. ಗೋವಿಂದೇಗೌಡರು ಈಗ ಮೃತರಾಗಿರುತ್ತಾರೆ. ಅವರು ಮೃತರಾಗಿ 9-10 ವರ್ಷ ಆಗಿದೆ. ಆ ಬಗ್ಗೆ ಅವರ ಮರಣ ಪತ್ರ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ, ಸರಿ.

9. ನನ್ನ ತಾಯಿಯ ತಾಯಿ ಹೆಸರು ಶಾರದಮ್ಮ. ಅವರು ಈಗ ಬದುಕಿಲ್ಲ. ಅವರು ಮೃತರಾದ ದಿನಾಂಕ ಗೊತ್ತಿಲ್ಲ, ಸುಮಾರು 5 ವರ್ಷ ಆಗಿದೆ. ಆ ಬಗ್ಗೆ ಅವರ ಮರಣ ಪತ್ರ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ, ಸರಿ.

10. ಗೋವಿಂದೇಗೌಡರ ತಂದೆಗೆ ವೆಂಕಟೇಗೌಡರಿಗೆ ದಾವಾ ಸ್ವತ್ತುಗಳು ಹೇಗೆ ಬಂದವು ಎಂದರೆ ನನಗೆ ಗೊತ್ತಿಲ್ಲ.

11. ದಾವಾ 3 ನೇ ಐಟಂ ಸ್ವತ್ತು ಅವರಿಗೆ ಸರ್ಕಾರದಿಂದ ಮಂಜೂರಾಗಿದೆ ಎಂದರೆ, ಒಟ್ಟು ಕುಟುಂಬದ ಸಲುವಾಗಿ ಮಂಜೂರಾಗಿರುತ್ತದೆ.

12. ನನ್ನ ತಾಯಿಗೆ ಮದುವೆಯಾಗಿ 36 ವರ್ಷ ಆಗಿದೆ. ಮದುವೆಯಾದಗಿನಿಂದಲೂ ನನ್ನ ತಾಯಿ ಬೂದಿತಿಟ್ಟು ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿ.

13. ಪುಷ್ಪ ಹಾಗೂ ರಾಣಿ ಯವರು ಮದುವೆಯಾಗಿ ಅವರ ಗಂಡನ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ. ಅವರ ಮದುವೆಯನ್ನು ಅವರ ತಂದೆ ಜೀವಂತ ಇದ್ದಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ.

14. ನನ್ನ ತಂದೆಗೆ ಬೂದಿತಿಟ್ಟು ಗ್ರಾಮದಲ್ಲಿ 2 ಎಕರೆ ಜಮೀನು ಇದೆ. ನಿಮಗೆ 10-15 ಎಕರೆ ಜಮೀನು ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಒಂದು 13*13 ಬ್ಯಾನರ್ ಇದೆ ಎಂದರೆ ಸರಿ.

15. ನಿಮ್ಮ ತಾಯಿ ಹಾಗೂ ಚಿಕ್ಕಮ್ಮಂದಿರು ಮದುವೆಯಾದ ನಂತರ, ಗೋವಿಂದೇಗೌಡರು, ಶಾರದಮ್ಮ ಹಾಗೂ 3 ನೇ ಪ್ರತಿವಾದಿ ಮಾತ್ರ ಅವರ ಗ್ರಾಮದಲ್ಲಿ ವಾಸವಿದ್ದರು ಎಂದರೆ ಸರಿ.

16. ಗೋವಿಂದೇಗೌಡ ಹಾಗೂ ಶಾರದಮ್ಮ ನವರ ಯೋಗಕ್ಷೇಮವನ್ನು 3 ನೇ ಪ್ರತಿವಾದಿ ನೋಡಿಕೊಳ್ಳುತಿದ್ದರು ಎಂದರೆ, ನಾವು ಸಹ ನೋಡಿಕೊಳ್ಳುತಿದ್ದೆವು ಎಂದು ನುಡಿಯುತ್ತಾರೆ.

17. ದಿಃ 31.08.2021 ರಲ್ಲಿ ನಿಮ್ಮ ತಾಯಿ, ಪುಷ್ಪ ಹಾಗೂ ರಾಣಿ ರವರು ಸೇರಿಕೊಂಡು ಗೋವಿಂದೇಗೌಡರ ಆಸ್ತಿಯಲ್ಲಿ ಭಾಗ ಬೇಡ ಎಂದು ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ, ಇಲ್ಲ ವಿಭಾಗ ಮಾಡಿಕೊಳ್ಳಬೇಕು ಪತ್ರ ಮಾಡಿಸುತ್ತೇವೆ ಬನ್ನಿ ಎಂದು ಕರೆದುಕೊಂಡು ಹೋಗಿ ಮೋಸದಿಂದ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

18. ನಿಮ್ಮ ತಾಯಿ ಹಾಗೂ ನಿಮ್ಮ ಪುಷ್ಪ ಹಾಗೂ ರಾಣಿ ರವರು ಅನೋನ್ಯವಾಗಿದ್ದಾರೆ ಎಂದರೆ, ಅವರು ನಮ್ಮ ಜೊತೆ ಮಾತಾಡುವುದಿಲ್ಲ ಎಂದು ನುಡಿಯುತ್ತಾರೆ.

19. ಹಕ್ಕು ಖುಲಾಸೆ ಪತ್ರದಲ್ಲಿ ರಾಣಿ, ಪುಷ್ಪ ಹಾಗೂ ಸುಮಾ ರವರ ಸಹಿ ಮತ್ತು ಪೋಟೋ ಇವೆ ಎಂದರೆ ಸರಿ.

20. ಜಲೇಂದ್ರ ಎಂಬುವವರು ನಿಮ್ಮ ಸಂಬಂಧಿಕರು ಎಂದರೆ, ಗೊತ್ತಿಲ್ಲ ಊರಿನವರು ಎಂದು ನುಡಿಯುತ್ತಾರೆ.

21. ಬಿ.ವಿ.ಜಲೇಂದ್ರ ಬಿನ್ ವೆಂಕಟೇಗೌಡ ಎಂದರೆ ನಿಮಗೆ ಸಂಬಂಧಿಕರು ಎಂದರೆ, ದಾಯಾದಿಗಳು ಎಂದು ನುಡಿಯುತ್ತಾರೆ.

22. ರಘು ಬಿನ್ ಗೋವಿಂದೇಗೌಡ ನನಗೆ ಗೊತ್ತಿಲ್ಲ. ಅವರೂ ಸಹ ಪೂನಾಡಹಳ್ಳಿಯವರು ಎಂದರೆ ನನಗೆ ಗೊತ್ತಿಲ್ಲ. ಅವರೂ ಸಹ ರಾಣಿ, ಪುಷ್ಪ ಹಾಗೂ ಸುಮಾ ರವರ ಸಂಬಂಧಿಕರು ಎಂದರೆ ಸರಿಯಲ್ಲ.

23. ಜಲೇಂದ್ರ ಹಾಗೂ ರಘು ರವರ ಮೇಲೆ ನಮಗೆ ವೈರತ್ವವಿಲ್ಲ ಎಂದರೆ ಸರಿ.

24. 3 ನೇ ಪ್ರತಿವಾದಿ ಮುತ್ತುರಾಜ ರವರ ಮೇಲೆ ನಮಗೆ ದ್ವೇಷ ಇಲ್ಲ ನಮ್ಮ ನಡುವೆ ಗಲಾಟೆ ಆಗಿಲ್ಲ ಎಂದರೆ ಸರಿ.

25. ನಿಮ್ಮ ತಾಯಿ ಹಾಗೂ ಚಿಕ್ಕಮ್ಮಂದಿರು ಜಲೇಂದ್ರ ರವರ ಕಾರಿನಲ್ಲಿ ಹೋಗಿ ಸ್ವ ಇಚ್ಛೆಯಿಂದ 3 ನೇ ಪ್ರತಿವಾದಿಗೆ ಹಕ್ಕು ಖುಲಾಸೆ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ, ಸರಿಯಲ್ಲ. ವಿಭಾಗ ಪತ್ರಕ್ಕೆ ಎಂದು ಮೋಸದಿಂದ ಸಹಿ ಪಡೆದಿರುತ್ತಾರೆ. ನಿಮ್ಮ ತಾಯಿ ಸಾಕ್ಷಿ ಹೇಳಲು ಬಂದು ಸದರಿ ವಿಚಾರ ಗೊತ್ತಾಗುತ್ತದೆ ಎಂದು ಅವರು ಬಂದಿಲ್ಲ ಎಂದರೆ ಸರಿಯಲ್ಲ.

26. ನಾವು ಪಹಣಿ ತೆಗೆದು ನೋಡಿದಾಗ ಗೊತ್ತಾಗಿರುತ್ತದೆ. ಈ ದಾವೆ ಹಾಕುವ 1 ತಿಂಗಳ ಹಿಂದೆ ಪಹಣಿ ನೋಡಿದಾಗ ಗೊತ್ತಾಗಿರುತ್ತದೆ.

27. ಹಕ್ಕು ಖುಲಾಸೆ ಪತ್ರದಲ್ಲಿ ಬರೆದಿರುವ ಎಲ್ಲಾ ಅಂಶಗಳನ್ನು ನಿಮ್ಮ ತಾಯಿ ಹಾಗೂ ಚಿಕ್ಕಮ್ಮಂದಿರು ಹೇಳಿ ಬರೆಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಆ ಸಮಯದಲ್ಲಿ ಖುದ್ದು ಹಾಜರಿರಲಿಲ್ಲ ಎಂದರೆ ಸರಿ. ಆ ಕಾರಣಕ್ಕೆ ನಿಮಗೆ ಯಾರು ಯಾವ ಪತ್ರಕ್ಕೆ ಸಹಿ ಹಾಕಿದ್ದಾರೆ ಎಂದು ಗೊತ್ತಿಲ್ಲ ಎಂದರೆ ಸರಿ. ನನ್ನ ತಾಯಿ ಅವರಿಗೆ ಓದಿ ಹೇಳದೇ ಸಹಿ ಪಡೆದಿರುತ್ತಾರೆ ಎಂದು ತಿಳಿಸಿರುತ್ತಾರೆ.

28. ಹಕ್ಕು ಖುಲಾಸೆ ಪತ್ರವನ್ನು ಬರೆದಿರುವ ಪತ್ರ ಬರಹಗಾರರು ಯಾರು ಎಂದು ನನಗೆ ಗೊತ್ತಿಲ್ಲ.

29. ಸದರಿ ಪತ್ರದಲ್ಲಿ ಯಾವ ಜಮೀನಿಗೆ ಸಂಬಂಧಪಟ್ಟಂತೆ ಹಾಗೂ ವಿಸ್ತೀರ್ಣದ ಬಗ್ಗೆ ಸಹ ಗೊತ್ತಿಲ್ಲ ಎಂದರೆ ಸರಿ.

30. ದಾವಾ ಸ್ವತ್ತುಗಳ ಚಕ್ಕುಬಂದಿ ಗೊತ್ತಿಲ್ಲ. ಸರ್ವೇ ನಂಬರ್ ಗಳು ಗೊತ್ತು.

31. ಗೋವಿಂದೇಗೌಡರಿಗೆ ಸ್ವತ್ತುಗಳು ಹೇಗೆ ಬಂದವು ಎಂದು ಗೊತ್ತಿಲ್ಲ, ಅವರ ತಂದೆಯಿಂದ ಬಂದವು ಎಂದು ನನ್ನ ತಾಯಿ ತಿಳಿಸಿರುತ್ತಾರೆ.

32. 3 ನೇ ಪ್ರತಿವಾದಿಗೆ ತೊಂದರೆಯಾಗಲಿ ಎಂದು ಬೇರೆಯವರ ಮಾತು ಕೇಳಿ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

33. ಪಹಣಿ ಹಾಗೂ ಎಂ.ಆರ್ ತೆಗೆಸಿ ನೋಡಿದಾಗ ಹಕ್ಕು ಖುಲಾಸೆ ಪತ್ರ ಬರೆಸಿರುವುದು ನಮಗೆ ಗೊತ್ತಾಗಿರುತ್ತದೆ ಹಾಗೂ ನನ್ನ ತಾತ ಅನಾರೋಗ್ಯದಲ್ಲಿದ್ದಾಗ ಅವರಿಂದ ವಿಲ್ ಸಹ ಬರೆಸಿಕೊಂಡಿರುವುದು ಗೊತ್ತಾಗಿರುತ್ತದೆ.

34. ನನ್ನ ತಾತ ಗೋವಿಂದೇಗೌಡರು ಅನಾರೋಗ್ಯದಲ್ಲಿದ್ದಾಗ ನಾವು ಸಹ ಆಸ್ಪತ್ರೆಗೆ ತೋರಿಸಿರುತ್ತೇವೆ. ಆ ಬಗ್ಗೆ ದಾಖಲೆಗಳು ಇಲ್ಲ.

35. ದಿಃ 07.12.2015 ರಂದು ನಿಮ್ಮ ತಾತ ಆರೋಗ್ಯವಾಗಿದ್ದಾಗ ಅವರ ಸ್ವಯಾರ್ಜಿತ ಆಸ್ತಿಯನ್ನು ನೊಂದಣಿ ಕಛೇರಿಯಲ್ಲಿ 3 ನೇ ಪ್ರತಿವಾದಿಯ ಹೆಸರಿಗೆ ವಿಲ್ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ, ಅವರಿಂದ ಮೋಸದಿಂದ ಸಹಿ ಹಾಕಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

36. ನನ್ನ ತಾತನನ್ನು ನಾನು ನೋಡಿದ್ದೇನೆ.

37. ನನ್ನ ತಾತ ವಿದ್ಯಾಭ್ಯಾಸ ಮಾಡಿರಲಿಲ್ಲ. ಅವರು ಎಲ್ಲಾ ದಾಖಲೆಗಳಿಗೆ ಹೆಬ್ಬೆಟ್ಟು ಗುರುತು ಹಾಕುತ್ತಿದ್ದರು ಎಂದರೆ ಸರಿ.

38. ಪೂನಾಡಹಳ್ಳಿಯ ಪಿ. ತಿಮ್ಮೇಗೌಡ ಹಾಗೂ ಜೆ.ಪಿ.ಕುಮಾರ ನನಗೆ ಗೊತ್ತಿಲ್ಲ. ಸದರಿಯವರು ಸದರಿ ವಿಲ್ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದರೆ, ಮೋಸದಿಂದ ಮಾಡಿಸಿದ್ದಾರೆ ಎಂದು ನುಡಿಯುತ್ತಾರೆ. ಸದರಿ ವಿಲ್ ಪತ್ರ ಮಾಡಿಸುವಾಗ ನೀವು ಖುದ್ದು ಹಾಜರಿರಲಿಲ್ಲ ಎಂದರೆ ಸರಿ.

39. ವಿಲ್ ಮಾಡಿದ ಆಸ್ತಿ ಗೋವಿಂದೇಗೌಡರಿಗೆ ಸರ್ಕಾರದಿಂದ ಮಂಜೂರಾಗಿದ್ದು ಎಂದರೆ, ನಮ್ಮ ತಾಯಿಗೂ ಸಹ ಭಾಗ ಬರಬೇಕು ಎಂದು ನುಡಿಯುತ್ತಾರೆ.

40. 3 ನೇ ಪ್ರತಿವಾದಿಗೆ ತೊಂದರೆಯಾಗಲಿ ಎಂದು ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ